## ಕರ್ನಾಟಕ ವಿಧಾನ ಪರಿಷತ್ತು

1. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 574(664)
2. **ಮಾನ್ಯ ಸದಸ್ಯರ ಹೆಸರು** : ಡಾ.ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
3. **ಉತ್ತರಿಸುವ ದಿನಾಂಕ** : 09.03.2026
4. **ಉತ್ತರಿಸುವ ಸಚಿವರು** : ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ)</td><td>ಬೆಳಗಾವಿ ಜಿಲ್ಲೆ ಸುಮಾರು 60 ಲಕ್ಷ ಜನಸಂಖ್ಯೆ ಹೊಂದಿದ ರಾಜ್ಯದ ಅತಿದೊಡ್ಡ ಜಿಲ್ಲೆಯಾಗಿದ್ದು, ಬ್ರಿಟಿಷರ ಕಾಲದಲ್ಲಿ (1859ರಲ್ಲಿ) ಸ್ಥಾಪಿಸಿದ ಆಸ್ಪತ್ರೆ ಜಾಗದಲ್ಲಿ ಇಂದು ಜಿಲ್ಲಾ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ; ಇಡೀ ಜಿಲ್ಲೆ ಈ ಒಂದು ಆಸ್ಪತ್ರೆ ಮೇಲೆಯೇ ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="4">ಬಂದಿದೆ.<br><br>ಬೆಳಗಾವಿ ಜಿಲ್ಲಾಸ್ಪತ್ರೆಯನ್ನು ಬೋಧನಾ ಆಸ್ಪತ್ರೆಯನ್ನಾಗಿ ಪರಿವರ್ತಿಸಿ, ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.<br><br>ಹಳೆಯ ಆಸ್ಪತ್ರೆ ಕಟ್ಟಡದ ವಾಸ್ತವ ಸ್ಥಿತಿಗತಿಯನ್ನು ತಿಳಿಯಲು CSIR Roorkee India ರವರಿಂದ ಕಟ್ಟಡದ ಮೌಲ್ಯಮಾಪನಗೊಳಿಸಿ ವರದಿ ಸಲ್ಲಿಸಲು ಸಂಸ್ಥೆಗೆ ಪ್ರಥಮದಲ್ಲಿ ನಿರ್ದೇಶಿಸಲಾಗಿದೆ. ತದನಂತರ, ಈ ಪ್ರಸ್ತಾವನೆ ಬಗ್ಗೆ NITK Suratkal ಇವರಿಂದ ಕಟ್ಟಡದ ಮೌಲ್ಯಮಾಪನಗೊಳಿಸಿ ವರದಿ ಸಲ್ಲಿಸಲು ನಿರ್ದೇಶಿಸಲಾಗಿದೆ. ವರದಿ ಸ್ವೀಕೃತವಾದ ನಂತರ ಹಾಲಿ ಕಟ್ಟಡ ರಿಪೇರಿ ಮಾಡುವ ಅಥವಾ ಕಟ್ಟಡದ ಅಗತ್ಯತೆ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.<br><br>ಇದಲ್ಲದೆ ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>1. 100 ಹಾಸಿಗೆಗಳ ತಾಯಿ & ಮಕ್ಕಳ ಆಸ್ಪತ್ರೆ ಕಟ್ಟಡದ ಕಾಮಗಾರಿ(ಜಿ+2) ಪ್ರಗತಿಯಲ್ಲಿದೆ.<br>2. ತಾಯಿ & ಮಕ್ಕಳ ಆಸ್ಪತ್ರೆಯ ಮೂರನೇಯ ಮಹಡಿಯಲ್ಲಿ 30 ಹಾಸಿಗೆಗಳ ಸುಟ್ಟಗಾಯಗಳ ಘಟಕದ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.<br>3. 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಆಸ್ಪತ್ರೆಯ ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದೆ.</td></tr>
<tr><td>ಆ)</td><td>ಬೆಳಗಾವಿಯ ವೈದ್ಯಕೀಯ ಶಿಕ್ಷಣ ಸಂಸ್ಥೆಗೆ (ಬಿಮ್ಸ್) ಇನ್ನು ವೈದ್ಯಕೀಯ ಬೋಧನಾ ಆಸ್ಪತ್ರೆ ಸ್ಥಾಪಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;</td></tr>
<tr><td>ಇ)</td><td>ಬೆಳಗಾವಿಯ ವೈದ್ಯಕೀಯ ಶಿಕ್ಷಣ ಸಂಸ್ಥೆಯೊಂದಿಗೆ ಸ್ಥಾಪಿಸಿದ ಬೀದರ್, ರಾಯಚೂರು, ಮಂಡ್ಯ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹೊಸದಾಗಿ ಬೋಧನಾ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದ್ದು, ದೊಡ್ಡ ಜಿಲ್ಲೆಯಾದ ಬೆಳಗಾವಿಯಲ್ಲಿ ಸ್ಥಾಪನೆ ಮಾಡದಿರುವುದಕ್ಕೆ ಕಾರಣಗಳೇನು;</td></tr>
<tr><td>ಈ)</td><td>ಬೆಳಗಾವಿ ನಗರದ ಮಧ್ಯದಲ್ಲಿಯೇ ವೈದ್ಯಕೀಯ ಶಿಕ್ಷಣ ಸಂಸ್ಥೆ ಪಕ್ಕದಲ್ಲಿ ಸಾಕಷ್ಟು ಸ್ಥಳವಿದ್ದು 500 ಬೆಡ್‌ಗಳನ್ನು ಹೊಂದಿದ ಹೊಸ ವೈದ್ಯಕೀಯ ಬೋಧನಾ ಆಸ್ಪತ್ರೆ ಸ್ಥಾಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?</td></tr>
</table>

**ಸಂಖ್ಯೆ**: ಎಂಇಡಿ 187ಎಂಎಂಸಿ 2026

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತ
ಮತ್ತು ಜೀವನೋಪಾಯ ಸಚಿವರು.